ಸಂಪುಟ ೩, ಸಂಚಿಕೆ ೧, ಮಾರ್ಚ್ ೨೦೨೪ | E-ISSN: 2583-8245
Volume 3, Issue 1, March 2024

# ಬಸವಣ್ಣನವರ ವಚನಗಳೂ... ಮನೋವಿಜ್ಞಾನವೂ...

**ಡಾ. ಮೈತ್ರಿ ಭಟ್**

ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ,

ವಿವೇಕಾನಂದ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು(ಸ್ವಾಯತ್ತ),

ಪುತ್ತೂರು – 574203

bhatmaithri@gmail.com

ಕನ್ನಡದ ಅನನ್ಯ ಸಾಹಿತ್ಯ ಪ್ರಕಾರವಾದ ವಚನವು ಅಂತರಂಗದ ಉತ್ಕಟ ಅವಸ್ಥೆಯಿಂದ ಹೊರಬಂದ ಶಬ್ದರೂಪ. ಅತ್ತ ಪದ್ಯವೂ ಅಲ್ಲದ ಇತ್ತ ಗದ್ಯವೂ ಅಲ್ಲದ ಈ ವಿಶಿಷ್ಟ ಲಯಬದ್ಧ ಗೀತೆಯು ಗಾತ್ರದಲ್ಲಿ ಕಿರಿದಾದರೂ ಜೀವ ವಿಕಾಸದ ಹಾದಿಯಲ್ಲಿ ಹಿರಿದಾದುದೇ ಆಗಿದೆ.

'ವಚನ' ಎಂದರೆ ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು. ಈ ವಚನಗಳು ಅಂತರಂಗದ ನಿವೇದನೆಗಳಾಗಿ, ಆತ್ಮಗತ ಸಂಭಾಷಣೆಗಳಾಗಿ ಹೊರಹೊಮ್ಮಿವೆ. ವಿವಿಧ ಕಾಯಕಗಳಲ್ಲಿ ತೊಡಗಿದ್ದ ನಾನಾ ಜಾತಿಮತಗಳ ಜನರು ತಮ್ಮ ಅಂತಃಪ್ರೇರಣೆಯ ತುಡಿತಕ್ಕೆ ಸ್ಪಂದಿಸಿದರು. ಅವರು ತಮ್ಮ ಮನದಾಳದ ಚಿಂತನೆಗಳನ್ನು ಜನಮಾನಸಕ್ಕೆ ತಲುಪಿಸಲು ಆಡುನುಡಿಯನ್ನು ಬಳಸಿಕೊಂಡರು. ಶುದ್ಧ ದೇಸೀ ಮನೋಭೂಮಿಕೆಯಲ್ಲಿ ಹುಟ್ಟಿದ ಇವು ಗದ್ಯದ ನಿರರ್ಗಳತೆಯಿಲ್ಲದಿದ್ದರೂ ಸರಳತೆಯಿಂದ, ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯದಿಂದ ಕೂಡಿ ಸ್ವಚ್ಛಂದ ಲಯದಲ್ಲಿ ಮಿಂದೇಳುತ್ತವೆ.

ಬಿಡಿಯಾಗಿ ನೋಡಿದರೆ ಮುತ್ತಿನಂತೆಯೂ, ಇಡಿಯಾಗಿ ನೋಡಿದರೆ ಮುತ್ತಿನ ಹಾರದಂತೆಯೂ ಶೋಭಿಸುವ ಈ ವಚನ ಪರಂಪರೆಯಲ್ಲಿ ವಚನಗಳ ಮೂಲಕ ಆತ್ಮಕಲ್ಯಾಣದ ಜೊತೆಗೆ ಸಮಾಜಕಲ್ಯಾಣದ ಬಗೆಗೂ ಜೀವಪರ ಹೆಜ್ಜೆಯಿಟ್ಟವರಲ್ಲಿ ಬಸವಣ್ಣ ಎಲ್ಲರ ಮನದಲ್ಲಿ ಇಂದಿಗೂ ನೆಲೆಯಾಗಿದ್ದಾರೆ.

ಬುದ್ಧಿ–ಅನುಭವದಿಂದ ಒಡಗೂಡಿರುವ ಈ ರಚನೆಗಳು ಆತ್ಮದ ಅರಿವಿನ ಸಂಕೇತವಾಗಿ ಬೆಳಗಿರುವುದನ್ನು ಕಾಣಬಹುದು. ಇಂತಹ ವಚನಗಳಲ್ಲಿ ಮನಸ್ಸಿನ ಬಗೆಗಿನ ವಿಚಾರಗಳು ಮತ್ತೆ ಮತ್ತೆ ಧ್ವನಿಸುತ್ತವೆ. ಆದರೆ ಅಷ್ಟು ಮಾತ್ರವಲ್ಲ; ಈ ವಚನಗಳಲ್ಲಿ ಅಡಕವಾಗಿರುವ ಸಾಮಾಜಿಕ, ಧಾರ್ಮಿಕ ಸುಧಾರಣಾವಾದಿ ಪರಿಕಲ್ಪನೆಗಳೊಂದಿಗೆ ಮನೋವಿಜ್ಞಾನದ ನೆಲೆಯಲ್ಲಿಯೂ ವಚನಗಳನ್ನು ವಿಶ್ಲೇಷಿಸುವುದಕ್ಕೆ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ವಚನಗಳನ್ನು ಪರಿಶೀಲಿಸಲು ಸಾಧ್ಯವಿದೆ.

DOI: 10.59176
http://www.kristujayantijournal.com/index.php/KJKSP

ಸಹಜ ಸುಂದರ ಶಬ್ದ ಸಂಪತ್ತಿನಿಂದ ಒಡಗೂಡಿ, ಅಗೆದಷ್ಟು ಮೊಗೆಯುವ ಅರ್ಥರೂಪದಿಂದ ಒಡಮೂಡಿರುವ ವಚನಗಳನ್ನು ಮನಸ್ಸಿನ ಅರಿವಿನ ಮೂಲಕ ಬೆರಗಿನಿಂದ ನೋಡಲು ಸಾಧ್ಯ. ಸಂಸಾರದ ನಿಸ್ಸಾರತೆ, ನಶ್ವರತೆಯನ್ನು ಸಾರುವ ವಚನಕಾರರು ಒಂದೆಡೆಯಿಂದ ಮ್ಯಾಸ್ಲೋ ಹೇಳುವ ಅವಶ್ಯಕತೆಗಳ ಶ್ರೇಣಿಯಲ್ಲಿ ಮೂಲಭೂತ ಅವಶ್ಯಕತೆಗಳ ವಿಚಾರಗಳನ್ನು ದಾಟಿ ಮುನ್ನಡೆಯಬೇಕಾದುದನ್ನು ಸೂಚಿಸುತ್ತಾರೆ.

ಸಾಧಕ ಕೈಗೊಳ್ಳಬೇಕಾದ ಯಾತ್ರೆಯ ಹಂತಗಳಲ್ಲಿ ಸಂಸಾರದ ಶರಧಿಯನ್ನು ದಾಟಬೇಕಾದುದು, ಮೋಹವನ್ನು ಕಳೆಯಬೇಕಾದುದು ಒಂದಾಗಿದೆ. ಈ ಸಂಸಾರ ಬಂಧನವನ್ನು ಬಸವಣ್ಣ 'ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ' ಎಂದು ಹೇಳುತ್ತಾನೆ. ಭಾವಸಂಗವನು ಅರಿಯದೆ ಅದು ಸಾಧ್ಯವಿಲ್ಲ. ಆಗ ಮಾಯೆಯ ಪರದೆ ಸರಿದು ನಿಜದ ಬೇರು ಚಿಗುರೊಡೆಯುತ್ತದೆ.

ನಮ್ಮ ಬದುಕಿನ ದೈನಂದಿನ ಚಲನವೆಲ್ಲ ಮನೋಕೇಂದ್ರಿತವಾದುದು. ನೋವು–ನಲಿವು, ಕೋಪ–ತಾಪ, ಒಳಿತು–ಕೆಡುಕುಗಳೆಲ್ಲ ಜನ್ಮತಾಳುವುದು ಈ ಮನೋಭೂಮಿಕೆಯಲ್ಲಿಯೇ. ಬದುಕನ್ನು ರೂಪಿಸುವ ಪ್ರಮುಖ ಸಾಧನವೆಂದರೆ ಅದು ನಮ್ಮ ಮನಸ್ಸೇ ಆಗಿದೆ. ಭೌತಿಕ ಆಗುಹೋಗುಗಳಿರಲಿ, ಆಧ್ಯಾತ್ಮಿಕ ತುಡಿತಗಳಿರಲಿ ಎಲ್ಲದರ ಮೂಲ ಸ್ಥಾನ ಮನಸ್ಸೇ ಆಗಿದೆ. ಭಕ್ತಿಮಾರ್ಗದ ಚಂಚಲತೆಗೆ, ಸಾಧನೆ ಮರೆಯಾಗುವುದಕ್ಕೆ ಕಾರಣ ಈ ಚಿತ್ತವೇ ಆಗಿದೆ.

ಈ ಮಾನವ ಮನಸ್ಸು ಎಂಬುದು ನೂರಾರು ಭಾವಸಂಕುಲಗಳ ಆಗರ. ಶರಣರ ಪ್ರಾರ್ಥನೆ, ದೈವ ಸಾಕ್ಷಾತ್ಕಾರದ ಹಂಬಲ, ಭಗವಂತನ ಅರಿವು, ಅರಿವಿನ ಬೆಳಗು, ಸಾಮಾಜಿಕ ಚಿಂತನೆ ಎಲ್ಲವೂ ಮೂರ್ತಗೊಳ್ಳುವುದು ಮನಸ್ಸಿನಲ್ಲಿಯೇ. ಒಟ್ಟಿನಲ್ಲಿ, ಮನಸ್ಸಿನ ವಿವೇಚನೆಯೇ ವಚನಗಳ ಸ್ವರೂಪವೆಂದರೂ ತಪ್ಪಾಗಲಾರದು.

ಸಕಾರಾತ್ಮಕ ಮತ್ತು ನಕಾರಾತ್ಮಕ ಚಿಂತನೆಗಳ ಉದ್ದೀಪನ ಸ್ಥಾನ ಮನಸ್ಸೇ ಆಗಿದೆ. ಮನಸ್ಸಿನ ವೇಗ ಅಚ್ಚರಿ. ಮನಸ್ಸು ಒಮ್ಮೆ ಪ್ರಪಂಚದತ್ತ ಹರಿದರೆ ಮತ್ತೊಮ್ಮೆ ಪಾರಮಾರ್ಥದತ್ತ ತಿರುಗುತ್ತದೆ. ಕಾಣದುದರ ಕಂಡಂತೆ ಕೇಳದುದ ಕೇಳಿದಂತೆ ಭಾವಿಸುತ್ತದೆ. ದಶದಿಕ್ಕಿಗೆ ಓಡುವ ಈ ಮನವ ಮಾರಿಗೊಪ್ಪಿಸದೆ ಕಾಯಬೇಕೆಂದು ಬಸವಣ್ಣನವರು ನಿವೇದಿಸುತ್ತಾರೆ. ಮನದ ಚೇಷ್ಟೆಗಳನ್ನು ಬಸವಣ್ಣನವರು ನಾನಾ ಪ್ರಾಣಿ ವರ್ತನೆಗಳೊಂದಿಗೆ ಸಮೀಕರಿಸಿದ್ದಾರೆ:

"ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ/ ವಿಚಾರಿಸಿದಡೆ ಏನೂ ಹುರುಳಿಲ್ಲವಯ್ಯಾ, ಕರಿ ಘನ ಅಂಕುಶ ಕಿರಿದೆನ್ನಬಹುದೆ?... ನಿಮ್ಮ ನೆನೆವ ಮನ ಕಿರಿದೆನ್ನಬಹುದೆ?, ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು/ ನಿಂದಲ್ಲಿ ನಿಲಲೀಯದೆನ್ನ ಮನವು, ಮರವನೇರಿದ ಮರ್ಕಟನಂತೆ/ ಹಲವು ಕೊಂಬೆಗೆ ಹಾಯುತ್ತಲಿದ್ದೇನೆ, ತನ್ನ ವಿಚಾರಿಸಲೊಲ್ಲದು/ ಇದಿರ ವಿಚಾರಿಸಹೋಹುದೀ ಮನವು, ತನ್ನಿಚ್ಛೆಯ ನುಡಿದಡೆ ಮೆಚ್ಚುವುದೀ ಮನವು/ ಇದಿರಿಚ್ಛೆಯ ನುಡಿದಡೆ ಮೆಚ್ಚದೀ ಮನವು, ಮನವೇ ಸರ್ಪ ತನುವೇ ಹೇಳಿಗೆ, ಕುದುರನೇಸ ತೊಳೆದಡೆಯೂ ಕೆಸರು ಮಾಬುದೆ?, ಬೆಲ್ಲವ ತಿಂದ ಕೋಡಗದಂತೆ... ಕಬ್ಬ ತಿಂದ ನರಿಯಂತೆ... ಗಗನವಡರಿದ ಕಾಗೆಯಂತೆ, ಒಡೆಯರ ಕಂಡಡೆ ಕಳ್ಳನಾಗದಿರಾ, ಓತಿ ಬೇಲಿವರಿವಂತೆ ಎನ್ನ ಮನವಯ್ಯಾ/ ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು/ ಬಾವುಲ

ಬಾಳೆಯಂತೆನ್ನ ಮನವು/ ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ, ಒಡೆಯರಿಗೆ ಒಡವೆಯನೊಪ್ಪಿಸಲಾರದೆ/ ಮೊರೆಯಿಡುವ ಮನವ ನಾನೇನೆಂಬೆ?, ಎನ್ನ ಮನವೆಂಬ ಮರ್ಕಟನು/ ತನುವಿಕಾರವೆಂಬ ಅಲ್ಪಸುಖದಾಸೆಗಾಡಿ/ ವೃಥಾ ಭ್ರಮೆಗೊಂಡು ನಾನಾ ದೆಸೆಗೆ ಲಂಘಿಸಿ/ ಅಳಲಿಸಿ ಬಳಲಿಸುತ್ತಿದೆ, ಮನ್ನಣೆ ತಪ್ಪಿದ ಬಳಿಕ ಅಲ್ಲಿರಬಹುದೆ?"

ಹೀಗೆ ಅನೇಕ ವಚನಗಳಲ್ಲಿ ಬಸವಣ್ಣನವರು ಮನದ ತೊಳಲಾಟವನ್ನು ಚಿತ್ರಿದ್ದಾರೆ. ಅಂದರೆ ಈ ಮನ ಎನ್ನುವುದು ಮೂಲಭೂತ ಅವಶ್ಯಕತೆಗಾಗಿ ಹೋರಾಡುತ್ತಾ ಅದರಲ್ಲೇ ಮುಳುಗಿರುವುದನ್ನು, ಅದನ್ನು ದಾಟಿ ಮೇಲೇರಬೇಕಾದುದನ್ನು ಸೂಚಿಸುತ್ತಾರೆ. ಅಂದರೆ ಮ್ಯಾಸ್ಲೋ ಹೇಳುವ ಮೂಲಭೂತ ಅವಶ್ಯಕತೆ ಎಂಬ ಹೆಚ್ಚು ಮನ ಬಯಸುವ ವಿಚಾರಗಳಿಗೆ ಇದು ಸಂಬಂಧಿಸಿದೆ.

ಬಾಳಿನ ಸುಖ–ದುಃಖಗಳಾಚೆ ಈ ಎಲ್ಲ ಅತೃಪ್ತಿ, ನಿರಾಸೆ, ತಳಮಳಗಳನ್ನು ದಾಟಿ ಮುನ್ನಡೆದಾಗ ದೊರಕುವ ಶಾಂತಿರಸದ ಹೊಂಬೆಳಕಿನ ಬಗ್ಗೆ ಹೇಳುತ್ತಾರೆ. ಇದೇ ಮ್ಯಾಸ್ಲೋ ಹೇಳುವ ಆತ್ಮಸಾಕ್ಷಾತ್ಕಾರ. ವಚನಕಾರರು ಹೇಳುವ ಇಂದ್ರಿಯ ವಿಕಾರ ಎಂದರೆ ಮ್ಯಾಸ್ಲೋ ಹೇಳುವ ಮೂಲಭೂತ ಅವಶ್ಯಕತೆಗಳೇ ಆಗಿವೆ. ಶರಣಾಗತನಾಗುವ ಮೂಲಕ ಬಾಳು ಬೆಳಕಾಗಬೇಕು ಎಂಬುದನ್ನು ಬಸವಣ್ಣನವರ ವಚನಗಳು ಸಾರಿ ಹೇಳುತ್ತವೆ.

'ಎನಗಿಂತ ಕಿರಿಯರಿಲ್ಲ' ಎಂಬ ಬಸವಣ್ಣನ ಆತ್ಮ ಶರಣಾಗತ ಭಾವ ಕೀರ್ತಿಗೆ ಬೆಲೆ ಕೊಡದ ಸದಾಚರ ಸಂಸ್ಕೃತಿಯ ವಚನಗಳು ಅಹಮ್ಮಿಕೆಯ ಹಂತವನ್ನು ದಾಟಿ ಮೇಲೇರಿದುದನ್ನು ಸೂಚಿಸುತ್ತವೆ. ಅವರು ಭಕ್ತಿ ಸಂಭಾಷಣೆಯಲ್ಲಿಯೇ ಆತ್ಮ ಸಾಕ್ಷಾತ್ಕಾರಗೊಳಿಸುತ್ತಾ, ಕಾಯವನ್ನೇ ದಂಡಿಗೆಯನ್ನಾಗಿ, ಶಿರವನ್ನು ಸೋರೆಯನ್ನಾಗಿ, ನರವನ್ನೇ ತಂತಿಯನ್ನಾಗಿ ಮಾಡಿ ಬೆರಳನ್ನು ಕಡ್ಡಿಯನ್ನಾಗಿಸಿ ಶಿವತತ್ವ ಗೀತೆಗಳನ್ನು ಹಾಡಿದರು.

'ಒಡೆ ಒಡು ಎನ್ನ ಮನೆಯಲಿಲ್ಲದಂತೆ ಮಾಡು' ಎಂದು ಕೇಳುವ ಅವರು 'ಅತ್ತಲಿತ್ತ ಹೋಗದಂತೆ ಹೆಳವನನ್ನಾಗಿ ಮತ್ತು ಸುತ್ತಿ ಸುಳಿದು ನೋಡದಂತೆ ಅಂಧಕನನ್ನಾಗಿಯೂ, ಮತ್ತೊಂದ ಕೇಳದಂತೆ ಕಿವುಡನನ್ನಾಗಿಸುವಂತೆ' ಮೊರೆಯಿಡುತ್ತಾರೆ. ಅಂದರೆ ಈ ಇಂದ್ರಿಯ ಲಾಲಸೆ, ದೈಹಿಕ ಭೋಗ–ಭಾಗ್ಯಗಳನ್ನು ದಾಟಿ ಮುನ್ನಡೆಯಬೇಕಾದುದೇ ಬದುಕಿನ ತತ್ವ ಎಂಬುದನ್ನು ಮತ್ತೆ ಮತ್ತೆ ಹೇಳುತ್ತಾರೆ. ಆಸೆ, ಆಮಿಷಗಳ ಮೋಹ ಬಯಕೆಗಳನ್ನು ದಾಟಿ, ಕಾಯ, ಮನಸ್ಸು ಮತ್ತು ಇಂದ್ರಿಯ ವಿಕಾರಗಳನ್ನು ಕಳೆದು ಇರುವ ಒಂದು ಬಾಳಿನಲ್ಲಿ ಭವಮುಕ್ತನಾಗಬೇಕು ಎಂಬ ಹಂಬಲವನ್ನು ಅನೇಕ ವಚನಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

ಇವರ ಕಣ್ಣಿನಲ್ಲಿ ಜ್ಞಾನ ಎಂದರೆ ಕೇವಲ ತಿಳಿವಳಿಕೆಯಲ್ಲ. ಅದರ ಸಾರ್ಥಕತೆಯಿರುವುದು ಕ್ರಿಯೆಯಲ್ಲಿ. ಇದನ್ನೇ ಮ್ಯಾಸ್ಲೋ ಕೂಡಾ ಹೇಳುವುದು. ಅರಿವಿನ ಸಾಕ್ಷಾತ್ಕಾರವಾದಾಗಲೇ ಬದುಕು ಸಾರ್ಥಕ ಎಂದು. ಇದೊಂದು ಬುದ್ಧಿ, ತರ್ಕವನ್ನು ಮೀರಿದ ಭವ. ಸಪ್ತವ್ಯಸನಗಳ ದಾಟಬೇಕಾದುದನ್ನು ವಚನಗಳು ಸಾರಿದರೆ, ಅಗತ್ಯಗಳ ಹಂತಗಳನ್ನು ದಾಟುವ

ವಿಚಾರಗಳನ್ನು ಮ್ಯಾಸ್ಲೋ ಮಂಡಿಸುತ್ತಾನೆ. ತನು–ಮನ–ಭವದ ಬಯಕೆಯನ್ನು ದಾಟುವುದು ಬದುಕಿನ ಸಾರ್ಥಕತೆ ಎಂದು ವಚನಕಾರರು ಹೇಳಿದುದನ್ನೇ ಮ್ಯಾಸ್ಲೋ ತನ್ನ ಮಾತುಗಳ ಮೂಲಕ ವ್ಯಕ್ತಪಡಿಸುತ್ತಾನೆ.

ಬಸವಣ್ಣನವರೂ ಮನಸ್ಸಿನ ಹಂಬಲ ಅಥವಾ ಮಾಯೆಯನ್ನು ಅರಿವಿನ ಶತ್ರು ಎಂದೇ ಭಾವಿಸುತ್ತಾರೆ. ಮನೋವಿಜ್ಞಾನದ ಪ್ರಕಾರ ಈ ನಮ್ಮ ಮೂಲಭೂತ ಅವಶ್ಯಕತೆಗಳೇ ನಾವು ಆತ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳದಂತೆ ತಡೆಯುವುದು ಎಂದೇ ಭಾವಿಸಲಾಗಿದೆ. ಕಾಮನೆ, ಆಸೆ, ಅಹಂಕಾರಗಳಿಂದ ಹೊರಬಂದಾಗ ಮಾತ್ರ ಬದುಕು ಉನ್ನತ ಆದರ್ಶಗಳ ಸಾಧನೆಯಲ್ಲಿ ತೊಡಗುವುದು. ಬೌದ್ಧಿಕ ಜ್ಞಾನದ ಜೊತೆಗೆ ಅಂತರಂಗದ ಅರಿವೂ ಅಗತ್ಯ. ಜ್ಞಾನವೇ ಕ್ರಿಯೆ ಅದರೆ ಕ್ರಿಯೆಯೇ ಜ್ಞಾನ.

ಅಂತರಂಗದ ವಿಕಾಸದ ಅಡಿಗಲ್ಲೇ ಭಕ್ತಿ. ಎತ್ತೆತ್ತಲೋ ಹರಿದು ಚೂರಾದ ವಿಷಯ ಸಾಗರದಲ್ಲಿ ಮುಳುಗಿ ಕಂಗೆಟ್ಟ ಮನವನ್ನು ಪರಮಾತ್ಮನಲ್ಲಿ ಐಕ್ಯವಾಗಿಸುವ ಶಕ್ತಿಯೇ ಭಕ್ತಿ. ಜ್ಞಾನ ಬುದ್ಧಿಯ ಕಾರ್ಯವಾದರೆ, ಭಕ್ತಿ ಭಾವದ ಬೆಳಕು. ಇದು 'ಗರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು'. ಇದಕ್ಕೆ ಅಡ್ಡಿಯಾಗುವುದು ಸಂಸಾರ ವ್ಯಾಮೋಹ ಮತ್ತು ವಿಷಯ ಸುಖದ ಹಾತೊರೆತ. ಶರಣಾಗತಿ ನೊಂದ ಎದೆಗೆ, ಬೆಂದ ಒಡಲಿಗೆ ಸಾಂತ್ವನವನ್ನು ನೀಡಬಲ್ಲುದು. ಅದಕ್ಕೆ ಕಿವಿ, ಕಣ್ಣು, ಕಾಯ, ಬಾಯಿ ಮತ್ತು ಮನದ ಸೂತಕ ಕಳೆಯಬೇಕು ಎನ್ನುತ್ತಾರೆ ಬಸವಣ್ಣನವರು.

ಒಂದೊಂದೇ ಹಂತವನ್ನು ದಾಟಿ ಮೇಲೇರಬೇಕಾದುದನ್ನು ಮ್ಯಾಸ್ಲೋ ಹೇಳಿದರೆ, ವೀರಶೈವ ಧರ್ಮದ ಷಟ್‌ಸ್ಥಲ ಹೇಳುವುದೂ ಅದನ್ನೇ. (ಸ್ಥಲ=ಮೆಟ್ಟಿಲು) ಈ ಹಂತಗಳನ್ನು ಏರುವುದು ಸಾಧಕನ ಮನಃಸ್ಥಿತಿಯನ್ನು ಅವಲಂಬಿಸಿರುತ್ತದೆ. ವಚನಕಾರರು ಮತ್ತು ಮ್ಯಾಸ್ಲೋ ಇಬ್ಬರೂ ಪ್ರಾಶಸ್ತ್ಯ ನೀಡಿರುವುದು ಚಿತ್ತವೃತ್ತಿಯ ವಿಕಾಸಕ್ಕೇ ಹೊರತು ಅದರ ನಿರೋಧಿಸುವಿಕೆಗೆ ಅಲ್ಲ.

ಅಂತರಂಗ ವಿಕಾಸದ ಮೂಲಕ ವ್ಯಕ್ತಿತ್ವವನ್ನು ವಿಕಸಿಸುವ ಮೌಲ್ಯಗಳ ಬಗೆಗೂ ಬಸವಣ್ಣ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಉದಾಹರಣೆಗೆ– 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ' ಎನ್ನುವ ಮೂಲಕ ಅಂತರಂಗಶುದ್ಧಿ ಹೊಂದಬೇಕಾದುದನ್ನು ಸೂಚಿಸಲಾಗಿದೆ. ಅಂತರಂಗದ ನೆಮ್ಮದಿಗೆ ಚಿತ್ತಶಮತೆ ಅವಶ್ಯ.

ನಮ್ಮ ಎಲ್ಲ ಸಂಕಲ್ಪ ವಿಕಲ್ಪಗಳು ಹುಟ್ಟುವುದು ನಮ್ಮ ಮನದಲ್ಲಿಯೇ. ನಮ್ಮ ಸುತ್ತಲಿನ ಪರಿಸರ ಮತ್ತು ಸಂಸ್ಕಾರಕ್ಕೆ ತಕ್ಕಂತೆ ಸಂಕಲ್ಪಗಳು ರೂಪುತಳೆಯುತ್ತವೆ. ಚಿತ್ತ/ಮನವೇ ಆಸೆಗಳ ಮೂಲ. ಪ್ರಜ್ಞೆ, ಗ್ರಹಿಕೆ, ಯೋಚನೆ, ವಿವೇಚನೆ, ನೆನಪಿನ ಸಮೂಹವೇ ಮನಸ್ಸು. ಲೋಕದೊಡನೆ ಸಂವಹನಿಸಲು ಬಳಕೆಯಾಗುವ ಈ ಮನಸ್ಸು ಹೊಯ್ದಾಡುವ ಸ್ವಭಾವವುಳ್ಳದ್ದಾಗಿದೆ. ಅದು ತನ್ನ ಚಾಂಚಲ್ಯವನ್ನು ಕಳೆದುಕೊಂಡು ಸ್ಥಿರವಾಗಬೇಕು. ಆಗ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ.

ಮನದ ಚಾಂಚಲ್ಯ, ಮನವನ್ನು ನಿಗ್ರಹಿಸುವ ಪರಿಯನ್ನು ಹೇಳುವ ಬಸವಣ್ಣ ಮನೋನಿಗ್ರಹ ಮತ್ತು ಸದೃಢ, ಸಮಷ್ಟಿ ಭಾವದ ಬಗ್ಗೆ ತಮ್ಮ ವಚನಗಳಲ್ಲಿ ವಿವರಿಸುತ್ತಾರೆ. ನುಡಿ–ನಡೆ ಶುದ್ಧಗೊಂಡಾಗ ಚಿತ್ತ ಶುದ್ಧಿಯಾಗುವುದು. ಅಷ್ಟಮದ, ಕರಣ ಚತುಷ್ಟಯಗಳಿಂದ ಚಂಚಲವಾಗುವ ಮನಸ್ಸನ್ನು ಕಾಯ ಮತ್ತು ಮನಸ್ಸಿನ ವಿಕಾರಗಳನ್ನು ಕಳೆಯುವ ಮೂಲಕ ಶುಚಿಗೊಳಿಸಬೇಕು ಎಂಬುದರ ಅರ್ಥ ಮೂಲಭೂತ ಅವಶ್ಯಕತೆಗಳನ್ನು ದಾಟಿ ಮುನ್ನಡೆಯಬೇಕು ಎಂಬುದೇ ಆಗಿದೆ. ಅಂತರಂಗ ಬಹಿರಂಗ ಶುದ್ಧಿಯಾದಾಗಲೇ ಬದುಕಿನ ಸಾರ್ಥಕ್ಯ ಎಂದು ಸಾರುವುದೇ ಬಸವಣ್ಣನವರ ವಚನಗಳ ಸಾರವಾಗಿದೆ.

**ಪರಾಮರ್ಶನ ಗ್ರಂಥ:**

೧. ವಚನ ದರ್ಶನ., ಶಿವಪ್ಪ, ಕೆ. ಸಿ., ೨೦೧೭, ಅಭಿನವ ಪ್ರಕಾಶನ, ಬೆಂಗಳೂರು.

೨. ವಚನ ಸಾಹಿತ್ಯದಲ್ಲಿ ಮನೋವಿಜ್ಞಾನ., ಇ–ಸುದ್ದಿ., ಸವಿತಾ ಮಾಟೂರ., ಆಗಸ್ಟ್ ೬, ೨೦೨೧.